ಅನ್ನೋವ. ಸೇರಿದ ಯಜಮಾನರು ಕೊಟ್ಟರೆ ಏನು, ಕೊಡದೇಯಿದ್ದರೆ ಏನು ಎಂದು ಬಿಡಿಬಿಡಿಸಿ ಹೇಳಿದರು. ಆದರೂ ತಲೆ ಕೊಡವಿದ. ಆಚೆ ಕರೆದೊಯ್ದು ಸಾಧಕ ಬಾದಕ ಬಿಡಿಸಿಟ್ಟರು. ಅನಂತರ ದಾರಿಗೆ ಬಂದ. ಯಜಮನರು ಹೇಳಿದರು, "ಶಾಂತಪ್ಪಗೆ ನೀನು ಹೊಸದಾಗಿ ಕಟ್ಟಿರೊ ದೊಡ್ಡ ಆರ್ಸಿಸಿ ಮನೆ, ಟ್ರಾಕ್ಟರು ಅವು ಯಾವುದರಲ್ಲು ಪಾಲು ಬ್ಯಾಡವಂತೆ. ಜಮೀನಿನಲ್ಲಿ ಪಾಲುಕೊಟ್ರೆ ಸಾಕಂತೆ" ಅಂದರು. ಕೊನರಿ ಕೊಸೆದಾಡಿ ಅಣ್ಣ ಒಪ್ಪಿಗೆಂದ. ರಸ್ತೆ ಪಕ್ಕದ ಎಂಟು ಎಕರೆ ಅಡಿಕೆ ತೋಟ, ಏಳು ಎಕರೆ ಹೊಲ ಶಾಂತಪ್ಪಗೆ ಅಂತ ಆಯ್ತು. 'ನೀನು ಹೊಡೆಸೋದು ಬಡಿಸೋದು ಬಿಡು. ಹೊಡಸಿದ್ರೆ ಹೋಗ್ತೀಯ ಜೈಲಿಗೆ, ಜೈಲು ಮುದ್ದೆ ಮುರಿಯಾಕೆ' ಅಂತ ಬಿಡಿಸಿ ಹೇಳಿದರು.

ಆಳುಕಾಳು ಹಚ್ಚಿ ನಿಂತಿದ್ದು ಕೆಲಸ ಮಾಡ್ಸಿ ತನಿಗೆ ಬಂದ ತೋಟಾನು ಚನ್ನಾಗೇ ಮಾಡಿದ ಶಾಂತಪ್ಪ. ರಸ್ತೆ ಪಕ್ಕದ ಹೊಲ ಅಲ್ಲವೆ, ಹಂಗಾಗಿ ಸುತ್ತಿನ ಊರಿನ ಗೌರವದ ನಾಕಾರು ಒಳ್ಳೊಳ್ಳೆ ಜನ ಇರೋರ್ನೆಲ್ಲಾ ಸೇರಿಸಿ ಟ್ರಸ್ಟ್ ಮಾಡಿದ ಶಾಂತಪ್ಪ. ತನ್ನ ಹೊಲ ತೋಟ ಅದರ ಆದಾಯನೆಲ್ಲ ಅದಕ್ಕೆ ಸೇರಂಗೆ ಬರೆದು ಕೊಟ್ಟ. ಅಲ್ಲೊಂದು ಶಾಲೆ ತೆಗೆದ. ಫೀಜು ಗೀಜು ಇಲ್ಲದೆ ಬಡವರ ಸ್ಕೂಲ್ ಮಾಡಿದ. ಜೊತೆಗೆ ಒಂದು ಅನಾಥಾಶ್ರಮ ತೆಗೆದ. ಒಳ್ಳೊಳ್ಳೆ ಮೇಸ್ಟ್ರು ಆರಿಸಿ ಕಟ್ಟುನಿಟ್ಟಿನಿಂದ ಕಲಿಸೊ ಹಾಂಗೆ ನೋಡಿದ. ಶಾಲೆ ನಾಲ್ಕು ವರ್ಷಕ್ಕೆ ಸುತ್ತು ಹಳ್ಳೀಲಿ ಹೆಸರಾದ ಶಾಲೆ ಆಯ್ತು. ಆಮ್ಯಾಲೆ ಕಾಲೇಜು ತೆಗದ. ಬಡವರು ಬಗ್ಗರಿಗೆಲ್ಲಾ ಆಸರೆಯಾತು. ಆರು ವರ್ಷಕ್ಕೆ ಎರಡು ಸಾವಿರ ಮಕ್ಕಳು ಸೇರಿದವು. ಆರುನೂರು ಮಕ್ಕಳು ಹಾಸ್ಟೆಲ್‌ನಲ್ಲಿ ಇದ್ದವು, ಅರವತ್ತು ಜನ ವೃದ್ಧರು ಅನಾಥಾಶ್ರಮದಲ್ಲಿ. ಎಲ್ಲವೂ ಸುಸೂತ್ರವಾಗೆ ನಡೆಯೊಂಗಾಯ್ತು. ಪಕ್ಕದ ಹಳ್ಳಿಯ ಎರಡು ಕಾನ್ವೆಂಟು ಮುಚ್ಚಿದವು.

ಆವಾಗೀವಾಗ ಸಾಧು ಬಸವ ಸ್ಕೂಲ್ ಹತ್ರ ಬರೋದು, ಶಾಂತಪ್ಪ ಕೊಡೊ ಹಿಡಿ ಹುಲ್ಲು ಕಡಲೆಕಾಯಿ, ಸೊಪ್ಪು ತಿಂದು ಹೋಗೋದು. ಹಂಗಂತಲೆ ಈಗಲೂ ಬಂತು. ಒಳಗೆಲ್ಲಾ ಓಡಿಯಾಡಿ ಮೂಸಿತು. ಸ್ವಲ್ಪ ಹೊತ್ತು ಅಲ್ಲೆ ಇದ್ದು ಅಲ್ಲಿ ಮೂಸಿ ಇಲ್ಲಿ ಮೂಸಿ ಮುಖ ಮೇಲಕ್ಕೆತ್ತಿ ಗುಡುರ್ರ್ ಎಂದು ಗುಟರುಹಾಕಿ ಹಂಗೆ ಹೋಯಿತು.

ಆವೊತ್ತೊಂದಿನ ಬೆಳಗ್ಗೆ ಎದ್ದು ಜವಾನ ಚಾ ಹಿಡಿದು ಶಾಂತಪ್ಪ ಇರೊ ಕೋಣೆಗೆ ಹೋಗವನೆ. ಅಲ್ಲಿ ಅವರಿಲ್ಲ. ಶಾಲೆಯ ಆಫೀಸು, ತೋಟ, ಹೊಲ ಹುಡುಕಿದರೂ ಇಲ್ಲ. ಏನು ಎತ್ತ ತಿಳಿಯದಾಯ್ತು. ಎಲ್ಲೋ ಹೋಗಿರಬೇಕು ಬಂದಾರು ಅಂದರೆ ಹಾಗೂ ಆಗಲಿಲ್ಲ. ಎಲ್ಲೋದರು, ಏನಾದರು ಒಂದೂ ತಿಳಿಲಿಲ್ಲ. ಆದರೆ, ಅವರು ಕಟ್ಟಿದ ಶಾಲೆ ಅನಾಥಾಶ್ರಮ ಅಚ್ಚುಕಟ್ಟಾಗಿ ನಡಿತಾಯಿವೆ.

### ಕುರುವ ಬಸವರಾಜ್

ಕವಿ, ಕತೆಗಾರ, ಜಾನಪದ ವಿದ್ವಾಂಸ, ಸಾಕ್ಷ್ಯಚಿತ್ರ ನಿರ್ದೇಶಕ ಕುರುವ ಬಸವರಾಜರ ಪ್ರಕಟಿತ ಕೃತಿಗಳು: 'ಕೋಳಿ ಅಂಕ', 'ಸೆಳತ' (ಕಥಾಸಂಕಲನಗಳು), 'ಬೇಲಿ ಮ್ಯಗಳ ಹೂವು' (ಕವನ ಸಂಕಲನ), 'ಮಣ್ಣ ಕುಸುಮದ ಹಕ್ಕಿ', 'ಹುಲ್ಲೆ ಹಾಡು', 'ಕಾಡೊಡಲ ಹಾಡು' (ಕಥನಗೀತೆಗಳು), 'ಗುಲಗಂಜಿ ಮಾದೇವಿ', 'ಜನಪದ ಒಗಟು ಕಥೆಗಳು' (ಸಂಪಾದನೆ). 'ಜಾನಪದ ಸಂವೇದನೆ' (ಲೇಖನಗಳ ಸಂಕಲನ). ಸಂಶೋಧನೆ: 'ಜನಪದ ಮಹಾಕಾವ್ಯಗಳ ನಿರ್ಮಾಣ ಪ್ರತಿಭೆಯ ನೆಲೆಗಳು'. ರಾಮನಗರದ ಜಾನಪದ ಲೋಕದ ಕ್ಯೂರೇಟರ್ / ಆಡಳಿತಾಧಿಕಾರಿಯಾಗಿ ನಿವೃತ್ತರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.